# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹಳಿಯಾಳ

## ಸಿ.ಸಿ. ನಂ. 41/2025

ದೂರುದಾರ : ಸರ್ಕಾರದ ಪರವಾಗಿ ಹಳಿಯಾಳ
ಪೊಲೀಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ಸುಬ್ಬಾರಾವ ತಂದೆ ದುರ್ಗಾಣಿ ಕರಂಜೆಕರ,
ವಯಸ್ಸು : 72 ವರ್ಷ, ವೃತ್ತಿಃ ರೈತಾಪಿ,
ಸಾಃ ಮಂಗಳವಾಡ, ತಾಃ ಹಳಿಯಾಳ, ಜಿಃ ಉ.ಕ.

2. ಪಾರ್ವತಿ ಕೋಂ ಸುಬ್ಬಾರಾವ್ ಕರಂಜೆಕರ,
ವಯಸ್ಸು : 67 ವರ್ಷ, ವೃತ್ತಿಃ ರೈತಾಪಿ,
ಸಾಃ ಮಂಗಳವಾಡ, ತಾಃ ಹಳಿಯಾಳ, ಜಿಃ ಉ.ಕ.

3. ಗೋಕುಳ ತಂದೆ ಸುಬ್ಬಾರಾವ್ ಕರಂಜೆಕರ,
ವಯಸ್ಸು : 37 ವರ್ಷ, ವೃತ್ತಿಃ ಗೌಂಡಿ,
ಸಾಃ ಮಲ್ವಾಡ, ತಾಃ ಹಳಿಯಾಳ, ಜಿಃ ಉ.ಕ.

## ಆಪಾದನೆ

ಆರೋಪಿತರಾದ ನೀವು ಮತ್ತು ಚಾಸಾ 6 ರವರ ನಡುವೆ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ವೈಮನಸ್ಸು ಇದ್ದು, ದಿನಾಂಕ 16-10-2024 ರಂದು ಬೆಳಗ್ಗೆ 11-00 ಗಂಟೆಯ ಸಮಯದಲ್ಲಿ ಹಳಿಯಾಳ ಪೊಲೀಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಹುಣ್ಸವಾಡ ಗ್ರಾಮದ ತಮ್ಮ ಮನೆಯಲ್ಲಿ ಚಾಸಾ 1 ರವರು ಇದ್ದಾಗ, ಅವರು ಚಾಸಾ 6 ರವರ ಮನೆಗೆ ಕೂಲಿ ಕೆಲಸಕ್ಕೆ ಹೋದ ವಿಷಯದ ಕುರಿತು, 1 ರಿಂದ 3 ನೇ ಆರೋಪಿತರಾದ ನೀವು ಚಾಸಾ 1 ರವರ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ 1 ರವರನ್ನು ಉದ್ದೇಶಿಸಿ "ಏ ರಂಡೇಚಾ, ಬೋಸುಡಿ ಮಗನೆ ನೀನ್ಯಾಕೆ ನನ್ನ ಅಣ್ಣನ ಮನೆಗೆ ಕೆಲಸಕ್ಕೆ ಹೋಗುತ್ತೀಯಾ, ಏ ಸೂಳೆ ಮಗನೆ ನಿನಗೆ ನಾನು ಹೇಳುವುದು ನಿನಗೆ ಕೇಳುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮ ಪೈಕಿ 2 ನೇ

ಆರೋಪಿಯಾದ ನೀವು ಚಾಸಾ 1 ರವರನ್ನು ಉದ್ದೇಶಿಸಿ "ಈ ಬೋಳಿ ಮಗನಿಗೆ ಮಾತಿನಲ್ಲಿ ಹೇಳಿದರೆ ಅರ್ಥ ಆಗುವುದಿಲ್ಲ" ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮ ಪೈಕಿ 3 ನೇ ಆರೋಪಿಯಾದ ನೀವು ಚಾಸಾ 1 ರವರನ್ನು ಉದ್ದೇಶಿಸಿ ಇವಂದು ಅತೀಯಾಯಿತು ಈ ಬೋಸುಡಿ ಮಗ ಇನ್ನೂಮ್ಮೆ ಅವರ ಮನೆಗೆ ಹೋದಾಗ ನನ್ನ ಕೈಗೆ ಸಿಗಲಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ನೀನು ಇನ್ನೊಮ್ಮೆ ಅವರ ಮನೆಗೆ ಕೆಲಸಕ್ಕೆ ಹೋಗಿದ್ದೆ ಆದರೆ ನಾನು ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕುವ ಮೂಲಕ ನೀವು ಭಾ.ನ್ಯಾಸಂ. ಕಲಂ,329(4), 351(2), 352 ಸಹಿತ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಆರೋಪಿ ಕ್ರ.1

ಪ್ರಶ್ನೆ1 : ಷದ್ರಿ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2: ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ.2

ಪ್ರಶ್ನೆ1 : ಷದ್ರಿ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2: ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ.3

ಪ್ರಶ್ನೆ1 : ಷದ್ರಿ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2: ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : ವಿಚಾರಣೆಯಾಗಬೇಕು.

(ಆಪಾದನೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸ್ಥಳ : ಹಳಿಯಾಳ.

ದಿನಾಂಕ : 02-09-2025.

ಪ್ರ.ದ.ನ್ಯಾದಂ. ಹಳಿಯಾಳ